ಅಧ್ಯಕ್ಷರು: ಈ ವಿಚಾರದ ಬಗ್ಗೆ ಚರ್ಚೆ ಮಾಡುವುದಕ್ಕೆ ಅರ್ಧ ಗಂಟೆ ಕಾಲಾವಕಾಶವನ್ನು ಕೊಡುತ್ತೇನೆ. ಅರ್ಧ ಗಂಟೆಯಲ್ಲಿ ಎಲ್ಲರೂ ಕೂಡ ಈ ಬಗ್ಗೆ ಮಾತನಾಡಬಹುದು.

ಅರಣ್ಯ ಇಲಾಖೆಗೆ ಒಳಪಟ್ಟ ಜಾಗಗಳು

9 (3) ಶ್ರೀ ವಸಂತ ಬಂಗೇರ ಕೆ. (ಬೆಳ್ತಂಗಡಿ):– ಅರಣ್ಯ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಬೆಳ್ತಂಗಡಿ ತಾಲ್ಲೂಕಿನಲ್ಲಿ ಅರಣ್ಯ ಇಲಾಖೆಯ ಅಧೀನಕ್ಕೆ ಎಷ್ಟು ಎಕರೆ ಜಾಗ ಒಳಪಟ್ಟಿರುತ್ತದೆ.

ಆ) ಅರಣ್ಯ ಇಲಾಖೆಗೆ ಒಳಪಟ್ಟು ಜಾಗಗಳ ಅತಿಕ್ರಮಣವಾಗಿರುವುದೇ, ಹಾಗಿದ್ದಲ್ಲಿ, ತೆರವಿಗೆ ಯಾವ ಕ್ರಮ ಕೈಗೊಳ್ಳಲಾಗಿದೆ (ವಲಯವಾರು ಸರ್ವೆ ನಂಬರ್, ವಿಸ್ತೀರ್ಣ ಸಹಿತ ವಿವರ ನೀಡುವುದು)?

ಶ್ರೀ ಸಿ.ಪಿ. ಯೋಗೇಶ್ವರ (ಅರಣ್ಯ ಸಚಿವರು):–

ಅ) ಬೆಳ್ತಂಗಡಿ ತಾಲ್ಲೂಕಿನಲ್ಲಿ ಅರಣ್ಯ ಇಲಾಖೆಯ ಅಧೀನಕ್ಕೆ ಬರುವ ಒಟ್ಟು ಅರಣ್ಯ ವಿಸ್ತೀರ್ಣ 125761.48 ಎಕರೆ ಇರುತ್ತದೆ. ವಿವರ ಈ ಕೆಳಕಂಡತಿರುತ್ತದೆ.

ವಿವರ	ಬೆಳ್ತಂಗಡಿ ತಾಲ್ಲೂಕಿನ ಅರಣ್ಯ ಇಲಾಖೆಯ ಅಧೀನಕ್ಕೆ ಒಳಪಟ್ಟ ಅರಣ್ಯ ಪ್ರದೇಶ	ವಿಸ್ತೀರ್ಣ (ಎಕರೆಗಳಲ್ಲಿ
ಮಂಗಳೂರು	ಬೆಳ್ತಂಗಡಿ ವಲಯ	29615.16
ಕುಂದಾಪುರ	ಉಪ್ಪಿನಂಗಡಿ ವಲಯ	44578.59
ಕುದುರೆಮುಖ ವನ್ಯಜೀವಿ ವಿಭಾಗ ಕಾರ್ಕಳ	ವೇಣೂರು ವಲಯ	6205.04
	ಬೆಳ್ತಂಗಡಿ ವನ್ಯಜೀವಿ ವಲಯ	45362.69
	ಒಟ್ಟು	125761.48

ಅ) ಬೆಳ್ತಂಗಡಿ ತಾಲ್ಲೂಕಿನಲ್ಲಿ ಅತಿಕ್ರಮಣವಾಗಿರುವ ಅರಣ್ಯ ಭೂಮಿ ವಿವರ ಈ ಕೆಳಗಿನಂತಿವೆ:–

ಕ್ರ. ಸಂ.	ವಿಭಾಗ	ವಲಯ	ವಿಸ್ತೀರ್ಣ
1	ಮಂಗಳೂರು	ಬೆಳ್ತಂಗಡಿ	755.911
		ಉಪ್ಪಿನಂಗಡಿ	931.320
2	ಕುಂದಾಪುರ	ವೇಣೂರು	92.79
3	ಕುದುರೆಮುಖ ವನ್ಯಜೀವಿ	ಬೆಳ್ತಂಗಡಿ ವನ್ಯಜೀವಿ	104.499
		ಒಟ್ಟು	1884.520

ಅತಿಕ್ರಮಣವಾದ ಅರಣ್ಯ ಪ್ರವೇಶವನ್ನು ತೆರವುಗೊಳಿಸಲು ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 64(ಎ) ರನ್ವಯ ಕ್ರಮ ಕೈಗೊಳ್ಳಲಾಗುತ್ತಿದೆ ವಲಯವಾರು, ಸರ್ವೆ ನಂಬರ್ ಹಾಗೂ ವಿಸ್ತೀರ್ಣದ ವಿವರವಾದ ತಃಖ್ತೆಯನ್ನು ಲಗತ್ತಿಸಲಾಗಿದೆ.

ANNEXURE (LAQ-3)

Range	Name of the Forest	Sy.No.	Extent of encroachment in Acres
1	2	3	4
Belthangady	Laila RF Extension Block	158/1	36.511
	Laila RF Extension Block	144	1.112
	Achinamale RF	157	15.004
	Naravi RF Extension Block	158/1	14.258
	Nadije Block	-	30.314
	Ujire Block-II	-	0.988
	Dharmasthala-Mundaje RF Extension Block	263/18	4.003
	Dharmasthala-Mundaje RF Extension Block	209/1 263/2	2.002
	Dharmasthala-Mundaje RF Extension Block	263/1	4.497
	Dharmasthala-Mundaje RF Extension Block	263/1C1	2.990
	Dharmasthala-Mundaje RF Extension Block	182/1	2.002
	Dharmasthala-Mundaje RF Extension Block	182/18	5.486
	Dharmasthala-Mundaje RF Extension Block	263	2.002
	Dharmasthala-Mundaje RF Extension Block	182/1P	3.855
	Charmady-Kanappady RF	144	251.575
	Laila RF	-	1.483
	Naravi Extension Block	144	3.484
	Belthangady RF	-	2.471
	Naravi RF Extension Block	160/1	0.988
	Naravi RF Extension Block	-	3.464
	Laila RF	-	1.977
	Nadije Block	98/1	4.300
	Naravi RF Extension Block	115/1	14.282
	Dharmasthala-Mundaje RF Extension Block	182	6.425
	Ujire Block-IV	-	1.438
	Chibidre Block	-	14.233
	Kaliya RF	-	1.087

	Charmady-Kanapady Extension Block-I, II & III	-	222.000
	Korangallu Block	-	37.633
	Kurubaragudde Block	-	4.991
	Nandikadu Block	-	4.720
	Naravi RF	-	10.329
	Charmady-Kanapady Extension Block-III	-	6.820
	Paranki Block	-	8.377
	Machina Block	-	2.965
	Malady Block	-	3.608
	Kukkala Block	48/1	7.512
	Naravi RF (Buffer)	-	10.329
	Charmady-Kanappady FF	-	4.398
	Total		755.911
Uppinagady	Kalanja Block	-	241.392
	Nidle Extension Block-I	-	259.949
	Dondalarabhi Extension Block	-	5.584
	Koyyur Block-II	-	64.839
	Koyyur Extension Block	-	0.297
	Dadanthamale Extension Block	-	96.987
	Mogru Extension Block-I	-	15.147
	Mogru Block-I	-	7.512
	Uruvalu Extension Block-II	-	5.323
	Bandaru Block	-	30.171
	Malangala Block	-	4.448
	Thannirupantha Block	-	3.459
	Ilanthila Block-I & II	-	2.768
	Uruvalu Block-II	-	9.909
	Shiradi-Shishila RF	-	2.471
	Shibaje RF	-	1.186
	Shiradi Extension Block-I to V	-	0.198
	Shishila Extension Block	-	3.509
	Shiradi-Shishila RF Extension Block	-	30.245
	Shiradi-Shishila RF Extension Block Shibaje	-	95.783
	Nidle RF	-	0.148
	Patrame RF	-	31.481
	Patrame RF (New)	-	1.977
	Kokkada Block-I to V	-	3.163
	Miyaru RF	-	13.393
	Total		931.320
Venooru	Moodudodi	102/1	0.31
	Pilya	66/1	2.54
	Savanalu	80	0.18

		31/1	0.03
		102/1	1.10
		84/1	0.13
	Kokradi	75/1	3.88
	Peradi	98	2.02
		100	0.60
		107/1	1.65
	Marodi	75/1	0.82
	Kudyadi	58/1	4.94
	Andinje	95/1	1.22
	Bajre	117/2	0.13
		150/1	2.05
		37/1	2.55
	Badakodi	72/1	0.030
	Kashipatha	150/1	4.40
		Badakodi RF	0.20
Venooru	Balanja	36	3.72
	Melanthabettu		0.12
	Badoli	49	2.021
	Tenkakaranduru	81/1	24.28
	Navara	41/1	1.22
	Shirlalu	95/1	1.90
	Karambaru	70/1	0.21
		84/1	12.79
	Hosangadi	175/1	1.779
	Venooru	85	
		86	2.88
		73	
		74	
	Gundoori	62/1	5.01
	Mundooru	69/1	7.37
		71/1	
	Sulkerimogru	64/1	0.75
	Total		92.79
Belthangadi WL	Naravi	236	2.199
		236	2.249
		236	1.507
		236	3.459
		160/192	4.250
		236	2.965
		236	1.038
		236	0.988
		236	1.112
		236	4.003
		236	4.942

	236	0.297
	236	4.942
	236	1.186
	236	1.631
	236	4.473
	236	6.622
	236	4.942
	236	0.099
	236	1.853
	236	2.990
	236	3.509
	236	3.410
	236	0.988
	236	1.260
	236	1.236
	236	4.003
	236	4.596
	236	2.471
	236	2.990
	236	2.990
	236	2.990
	236	3.212
	236	4.003
	236	4.003
Total		104.499

ವಿಧಾನ ಸಭೆಯ ಸದಸ್ಯರಾದ ಶ್ರೀ ವಸಂತ ಬಂಗೇರ ಕೆ. (ಬೆಳ್ತಂಗಡಿ)
ರವರ ಸಂಖ್ಯೆ 3ರ ಉತ್ತರ
ಪೂರಕ ಟಿಪ್ಪಣಿ

ಮಂಗಳೂರು ವೃತ್ತ ವ್ಯಾಪ್ತಿಗೆ ಒಳಪಡುವ ವಿಭಾಗಗಳಾದ ಮಂಗಳೂರು ವಿಭಾಗದಲ್ಲಿ 74193.75 ಎಕರೆ, ಕುಂದಾಪುರ ವಿಭಾಗದಲ್ಲಿ 6205.04 ಎಕರೆ ಮತ್ತು ಕುದುರೆಮುಖ ವನ್ಯಜೀವಿ ವಿಭಾಗ, ಕಾರ್ಕಳದಲ್ಲಿ 45362.69 ಎಕರೆ ಬೆಳ್ತಂಗಡಿ ತಾಲ್ಲೂಕಿನ ಅರಣ್ಯ ಇಲಾಖೆಯ ಅಧೀನಕ್ಕೆ ಒಳಪಡುವ ಜಾಗ ಆಗಿರುತ್ತದೆ. ಈ ಪೈಕಿ ಮಂಗಳೂರು ವಿಭಾಗದಲ್ಲಿ 1687.231 ಎಕರೆ ಕುಂದಾಪುರ ವಿಭಾಗದಲ್ಲಿ 92.79 ಹಾಗೂ ಕುದುರೆಮುಖ ವನ್ಯಜೀವಿ ವಿಭಾಗ, ಕಾರ್ಕಳದಲ್ಲಿ 104.499 ಎಕರೆ ಜಾಗ ಅತಿಕ್ರಮಣವಾಗಿರುತ್ತದೆ. ಅತಿಕ್ರಮಣವಾದ ಅರಣ್ಯ ಪ್ರದೇಶವನ್ನು ತೆರವುಗೊಳಿಸಲು ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 64(ಎ) ರನ್ವಯ ಕ್ರಮ ಕೈಗೊಳ್ಳಲಾಗುತ್ತಿದೆ.

ವಿಭಾಗ	ಬೆಳ್ತಂಗಡಿ ತಾಲ್ಲೂಕಿನ ಅರಣ್ಯ ಇಲಾಖೆಯ ಅಧೀನಕ್ಕೆ ಒಳಪಟ್ಟ ಅರಣ್ಯ ಪ್ರದೇಶ (ವಿಸ್ತೀರ್ಣ ಎಕರೆಗಳಲ್ಲಿ)		ಅವುಗಳಲ್ಲಿ ಅತಿಕ್ರಮಣವಾಗಿರುವ ಅರಣ್ಯ ಪ್ರದೇಶದ ವಿವರ (ವಿಸ್ತೀರ್ಣ ಎಕರೆಗಳಲ್ಲಿ)		
ಮಂಗಳೂರು	ಬೆಳ್ತಂಗಡಿವಲಯ	– 29615.16	ಬೆಳ್ತಂಗಡಿ ವಲಯ	–	755.911
	ಉಪ್ಪಿನನಂಗಡಿ ವಲಯ	– 44578.59	ಉಪ್ಪಿನಗಂಗಡಿ	–	931.20
ಕುಂದಾಪುರ	ವೇಣೂರು ವಲಯ	– 6205.04	ವೇಣೂರು ವಲಯ	–	92..79
ಕುದುರೆಮುಖ ವನ್ಯಜೀವಿ ವಿಭಾಗ, ಕಾರ್ಕಳ	ಬೆಳ್ತಂಗಡಿ ವನ್ಯಜೀವಿ ವಲಯ	– 45362.69	ಬೆಳ್ತಂಗಡಿ ವನ್ಯಜೀವಿ ವಲಯ	–	104.479
ಒಟ್ಟು		125761.48			1884.520

ಶ್ರೀ ಕೆ. ವಸಂತ ಬಂಗೇರ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ ನನ್ನ ಕ್ಷೇತ್ರದಲ್ಲಿ ಕಂದಾಯ ಇಲಾಖೆಗೆ ಸಂಬಂಧಪಟ್ಟ ಜಾಗವನ್ನು ಅರಣ್ಯ ಇಲಾಖೆಯವರು ಗಿಡ ನೆಡಲಿಕ್ಕೆ ತೆಗೆದುಕೊಂಡು ಬೇಲಿ ಹಾಕಿ ಬೆಳೆದ ಮರಗಳನ್ನು ಕಡಿದ ನಂತರ ಅದನ್ನು ಆ ಜಾಗವನ್ನು ಬಿಟ್ಟುಕೊಡುತ್ತಿಲ್ಲ. ತಾಲ್ಲೂಕಿನ ಹೆಚ್ಚಿನ ಕಡೆ ರೆವಿನ್ಯೂ ಭೂಮಿಯನ್ನು ಅರಣ್ಯ ಇಲಾಖೆಯವರು ಬೇಲಿ ಹಾಕಿಕೊಂಡು ವಶದಲ್ಲಿ ಇಟ್ಟುಕೊಂಡಿದ್ದಾರೆ. ಬಡವರಿಗೆ ಕೊಡಲು ಸೈಟು ಇಲ್ಲ. ಅರಣ್ಯ ಇಲಾಖೆಯವರಿಗೆ ಬೇಕಾದಷ್ಟು ಜಾಗವಿದೆ. ಆ ರೆವಿನ್ಯೂ ಜಾಗವನ್ನು ತಕ್ಷಣ ಬಿಟ್ಟುಕೊಡಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ.

ಎರಡನೆಯದಾಗಿ, ಅನೇಕ ಬಡವರು ಅವರ ಕುಮ್ಕಿ ಸ್ಥಳದಲ್ಲಿ ಕೃಷಿ ಮಾಡಿದ್ದಾರೆ. ರೆವಿನ್ಯೂ ಜಾಗದಲ್ಲಿ ಕೃಷಿ ಮಾಡಿದ್ದಾರೆ. ಬೇಲಿ ಹಾಕಿ ರಕ್ಷಣೆ ಮಾಡಿಕೊಂಡಿದ್ದಾರೆ. ಅದೆಲ್ಲಾ ಅರಣ್ಯ ಭೂಮಿ ಎಂದು ಹೇಳಿ ಅರಣ್ಯ ಇಲಾಖೆಯವರು ತೊಂದರೆ ಕೊಡುತ್ತಿದ್ದಾರೆ. ಇದನ್ನು ತಕ್ಷಣ ನಿಲ್ಲಿಸಬೇಕೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಲು ಇಷ್ಟಪಡುತ್ತೇನೆ. ಅನೇಕ ಬಡವರಿಗೆ ಅವರ ಕುಮ್ಕಿ ಜಾಗದಲ್ಲಿ ಕೃಷಿ ಮಾಡಿ ಅಕ್ರಮ–ಸಕ್ರಮ ಆಗಿದೆ. ಅದೇ ರೀತಿ ಅನೇಕ ಬಡವರಿಗೆ ರೆವಿನ್ಯೂ ಜಾಗದಲ್ಲಿ ಕೃಷಿ ಮಾಡಿರುವವರಿಗೆ ಅಕ್ರಮ–ಸಕ್ರಮದಲ್ಲಿ ಜಾಗ ಮಂಜೂರಾಗಿದೆ. ಆ ಜಾಗವೂ ಅರಣ್ಯ ಇಲಾಖೆಗೆ ಸಂಬಂಧಪಟ್ಟದ್ದು ಎಂದು ಹೇಳಿ ಎಲ್ಲ ಬಡವರಿಗೆ ಇಲ್ಲದಸಲ್ಲದ ಆರೋಪ ಮಾಡಿ ಅರಣ್ಯ ಇಲಾಖೆಯವರು ತೊಂದರೆ ಕೊಡುತ್ತಿದ್ದೀರಿ. ಈ ತೊಂದರೆಯನ್ನು ತಕ್ಷಣ ನಿಲ್ಲಿಸಬೇಕೆಂಬ ಒತ್ತಾಯವನ್ನು

ಮಾನ್ಯ ಅರಣ್ಯ ಸಚಿವರಲ್ಲಿ ಮಾಡುತ್ತಿದ್ದೇನೆ. ಈ ಎಲ್ಲಾ ಜಾಗಗಳನ್ನು ಅರಣ್ಯ ಇಲಾಖೆ ಮತ್ತು ಕಂದಾಯ ಇಲಾಖೆ ಸೇರಿ ಜಂಟಿ ಸರ್ವೆ ಮಾಡಬೇಕು. ದಕ್ಷಿಣ ಕನ್ನಡ ಜಿಲ್ಲೆ ಮಾನ್ಯ ಮುಖ್ಯಮಂತ್ರಿಗಳ ಜಿಲ್ಲೆ. ನಿಮ್ಮ ಜಿಲ್ಲೆಗೆ ಭಾರಿ ಒಂದು ದೊಡ್ಡ ಗಂಡಾಂತರ ಬಂದಿದೆ. ಆ ದೊಡ್ಡ ಗಂಡಾಂತರ ನಿಮ್ಮ ಹೆಗಲ ಮೇಲೆ ಹಾಗೂ ಅರಣ್ಯ ಸಚಿವರ ಮೇಲೆ ಇದೆ. ನೀವು ಒಂದು ಹೇಳಿಕೆ ಕೊಟ್ಟಿದ್ದೀರಿ ಏನೆಂದರೆ, ಕಾಡಿನಲ್ಲಿ ಜನ ವಾಸಿಸಬಾರದು, ಯಾರು ಸಾವಿರಾರು ವರ್ಷಗಳಿಂದ ಅವರ ಅಜ್ಜನ ಕಾಲದಿಂದ ಕಾಡಿನಲ್ಲಿ ವಾಸಿಸುತ್ತಿದ್ದಾರೋ ಅವರನ್ನೆಲ್ಲಾ ಹೊರಗೆ ಹಾಕಬೇಕು, ಮತ್ತೆ ಅಲ್ಲಿ ಯಾರನ್ನು ಸಾಕಬೇಕು? ಪ್ರಾಣಿಗಳನ್ನು ಸಾಕಬೇಕು. ಕಾಡಿನಲ್ಲಿ ಪ್ರಾಣಿಗಳನ್ನು ಸಾಕಬೇಕು. ಅಂದರೆ ಮನುಷ್ಯರು ಪ್ರಾಣಿಗಳಿಗಿಂತ ಕೀಳು ಎನ್ನುವ ಭಾವನೆ ಇಲ್ಲಿ ಬರುತ್ತದೆ. ಇದು ಏನು, ಪುಷ್ಪಗಿರಿ ವನ್ಯಧಾಮ, ಬೆಳ್ತಂಗಡಿ ತಾಲ್ಲೂಕಿನ 12 ಗ್ರಾಮ, ಪುತ್ತೂರು ಮತ್ತು ಸುಳ್ಯ ತಾಲ್ಲೂಕಿನ 9 ಗ್ರಾಮ ಒಟ್ಟು 21 ಗ್ರಾಮ ಸರ್ವನಾಶವಾಗುತ್ತಿದೆ. ಇಲ್ಲಿ 8 ಗಂಟೆಯ ನಂತರ ವಾಹನ ಹೋಗಲು ಸಾಧ್ಯವಿಲ್ಲ. ಎಲ್ಲಾ ಗೇಟ್ ಹಾಕಿ ಬಂದ್ ಮಾಡಿರುತ್ತಾರೆ. ಇಲ್ಲಿ ಜನಜೀವನವೇ ಕಷ್ಟ. ಇದಕ್ಕೆ ನಾನು ವಿರೋಧಿಸುತ್ತೇನೆ ಎಂದು ಮಾನ್ಯ ಮುಖ್ಯಮಂತ್ರಿಗಳು ಒಪ್ಪಿಕೊಂಡಿದ್ದೀರಿ, ಮಾನ್ಯ ಅರಣ್ಯ ಸಚಿವರು ಒಪ್ಪಿಕೊಂಡಿದ್ದೀರಿ. ಆ ವಿರೋಧವನ್ನು ಮುಂದುವರೆಸಿ, ಏನು ಈ ಗಂಡಾಂತರ ಬಂದಿದೆ, ಈ ಯೋಜನೆಯನ್ನು ತಕ್ಷಣ ನಿಲ್ಲಿಸಿ, ದಕ್ಷಿಣ ಕನ್ನಡ ಜಿಲ್ಲೆಯ, ಬೆಳ್ತಂಗಡಿ ತಾಲ್ಲೂಕಿನ, ಪುತ್ತೂರು ತಾಲ್ಲೂಕಿನ, ಸುಳ್ಯ ತಾಲ್ಲೂಕಿನ ಜನತೆ ನೆಮ್ಮದಿಯಿಂದ ಜೀವನ ಮಾಡುವಂತಹ ಅವಕಾಶವನ್ನು ಕಲ್ಪಿಸಿಕೊಡಬೇಕು ಎನ್ನುವ ಒತ್ತಾಯವನ್ನು ಈ ಸಂದರ್ಭದಲ್ಲಿ ಮಾಡುತ್ತಿದ್ದೇನೆ.

ಶ್ರೀ ಡಿ.ಎನ್. ಜೀವರಾಜ್: ಮಾನ್ಯ ಅಧ್ಯಕ್ಷರೆ, ಇದು ಬಹಳ ಗಂಭೀರವಾದಂತಹ ವಿಷಯವಾಗಿದೆ. ಈ ವಿಷಯಕ್ಕೆ ಅರ್ಧ ಗಂಟೆ ಚರ್ಚೆಗೆ ಅವಕಾಶ ಕೊಡಬೇಕಾಗುತ್ತದೆ. ಇದನ್ನು ಪ್ರಶ್ನೋತ್ತರದಲ್ಲಿ ಮುಗಿಸುವಂತಹ ಪ್ರಶ್ನೆ ಎಂದು ಅನಿಸುವುದಿಲ್ಲ.

ಅಧ್ಯಕ್ಷರು: ಮೊದಲು ಮಾನ್ಯ ಸಚಿವರು ಉತ್ತರ ಕೊಡಲಿ. ಅನಂತರ ನೋಡೋಣ.

(ಗೊಂದಲ)

ಶ್ರೀ ಡಿ.ಎನ್. ಜೀವರಾಜ್: ಎಲ್ಲ ಕ್ಷೇತ್ರಗಳ ಸಮಸ್ಯೆ ಇದೆ.

(ಗೊಂದಲ)

ಅಧ್ಯಕ್ಷರು: ಇಡೀ ನಾಲ್ಕೈದು ಜಿಲ್ಲೆಗಳ ಸಮಸ್ಯೆ ಇದು.

ಒಬ್ಬ ಮಾನ್ಯ ಸದಸ್ಯರು: ಮಾನ್ಯ ಸಚಿವರು ಮುಖ್ಯ ಪ್ರಶ್ನೆಗೆ ಉತ್ತರ ನೀಡಿದ ಮೇಲೆ ತಾವು ಕೇಳಿ.

ಶ್ರೀ ಡಿ.ಎನ್. ಜೀವರಾಜ್: ಎಲ್ಲರದ್ದೂ ಪ್ರಶ್ನೆ ಇದೆ. ನಮಗೆ ಮಾತನಾಡಲು ಅವಕಾಶ ಕೊಡಬೇಕಲ್ಲವೇ? ನಮ್ಮಲ್ಲಿ ಬಹಳಷ್ಟು 60–65 ಸಾವಿರ ಹೆಕ್ಟೇರ್ ರೆವಿನ್ಯೂ ಜಾಗಗಳನ್ನು ಡಿ.ಸಿ.ಯವರೆ Forest Department ನವರಿಗೆ hand over ಮಾಡಿದ್ದಾರೆ. ಇಡೀ ದೇಶದಲ್ಲಿ, ಇಡೀ ರಾಜ್ಯದಲ್ಲಿ ಎಲ್ಲೂ D.C. forest ಎಂದು ಕಾಡಿಲ್ಲ. ನಮ್ಮಲ್ಲಿ ಗೋಪಾಲಕೃಷ್ಣಗೌಡರ ಹತ್ತಿರ ಕಾಡಿದೆ.

(ಗೊಂದಲ)

ಅಧ್ಯಕ್ಷರು: ಮಾನ್ಯ ಸಚಿವರು ಉತ್ತರ ನೀಡಲಿ. ಅನಂತರ ನೋಡೋಣ. ನಾಲ್ಕೈದು ಜಿಲ್ಲೆಗಳಲ್ಲಿ ಎಲ್ಲರದ್ದೂ common ಸಮಸ್ಯೆಯಾಗಿದೆ.

ಶ್ರೀ ಹೆಚ್. ಗೋಪಾಲ ಭಂಡಾರಿ: ಮಾನ್ಯ ಅಧ್ಯಕ್ಷರೆ, ಕಾರ್ಕಳದ್ದು ಇದರಲ್ಲಿ ಸೇರಿದೆ.

(ಗೊಂದಲ)

ಅಧ್ಯಕ್ಷರು: ಮಾನ್ಯ ಸಚಿವರು ಉತ್ತರ ನೀಡಲಿ, ಎಲ್ಲರೂ ಕೇಳಿದರೆ ಹೇಗೆ? ಇಡೀ ಮೂರ್ನಾಲ್ಕು ಜಿಲ್ಲೆಗಳಿಗೆ ಸಂಬಂಧಪಟ್ಟ ಗಂಭೀರ ಸಮಸ್ಯೆಯಾಗಿದೆ. ಮೊದಲು ಮಾನ್ಯ ಸಚಿವರು ಉತ್ತರ ಕೊಡಲಿ.

ಶ್ರೀ ಸಿ.ಪಿ. ಯೋಗೇಶ್ವರ್: ಅರಣ್ಯ ಮತ್ತು ರೆವಿನ್ಯೂ ಭೂಮಿಗೆ ಸಂಬಂಧಪಟ್ಟಂತಹ ವಿಚಾರ.

ಶ್ರೀ ಎಂ.ಪಿ. ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ಎಲ್ಲಾ ಸರ್ಕಾರಗಳು ಕೂಡ ರಾಗಿ, ಜೋಳ ಬೆಳೆಯುವವರಿಗೆ ಅರಣ್ಯ ಮಂತ್ರಿ ಸ್ಥಾನ ಕೊಟ್ಟರು. ಅರಣ್ಯದ ಮಹತ್ವದ ಬಗ್ಗೆ ಅರಿವು ಇಲ್ಲದವರಿಗೆ ಕೊಟ್ಟು ಇವತ್ತು ನಾವೆಲ್ಲಾ ಬೀದಿಪಾಲಾಗಿ ಹೋಗಿದ್ದೇವೆ. ಇವತ್ತು ನಮ್ಮ ಸಣ್ಣ ರೈತರು 10 ಗುಂಟೆ, 2 ಗುಂಟೆ ಕೂಡ ಮಾರುವಂತಹ ಪರಿಸ್ಥಿತಿ ಬಂದಿದೆ. ಈ ಸರ್ಕಾರ ಇರಬಹುದು, ಯಾವುದೇ ಸರ್ಕಾರ ಇರಬಹುದು, ರಾಗಿ ಜೋಳ ಬೆಳೆಯುವವರಿಗೆ ಅರಣ್ಯ ಮಂತ್ರಿಗಳ ಸ್ಥಾನ ಏಕೆ ಕೊಡಬೇಕು ಹೇಳಿ? ನಮ್ಮ ಕಷ್ಟ

ಯಾರಿಗೆ ಅರ್ಥವಾಗುತ್ತದೆ? ನಮ್ಮ ಸಮಸ್ಯೆ ಯಾರಿಗೂ ಅರ್ಥವಾಗುತ್ತಿಲ್ಲ. ಆದ್ದರಿಂದ ಮಾನ್ಯ ಅಧ್ಯಕ್ಷರೆ ಇದರ ಬಗ್ಗೆ ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಡಬೇಕು. ತಾವೂ ಅಲ್ಲಿಂದ ಬಂದಿದ್ದೀರಿ. ಇವತ್ತು ಎಲ್ಲಿಯೂ ನಮಗೆ ತಿರುಗಾಡುವುದಕ್ಕೆ ದಾರಿ ಇಲ್ಲ. ಮನೆ ಕಟ್ಟುವುದಕ್ಕೆ ಜಾಗವಿಲ್ಲ. ಸ್ಕೂಲ್ ಕಟ್ಟುವ ಹಾಗೆ ಇಲ್ಲ, ಅಂಗನವಾಡಿ ಕಟ್ಟುವ ಹಾಗೆ ಇಲ್ಲ. ಇದರ ಬಗ್ಗೆ ಸಮಗ್ರವಾಗಿ ಚರ್ಚೆಯಾಗಬೇಕು. ಸನ್ಮಾನ್ಯ ಮುಖ್ಯಮಂತ್ರಿಗಳು ತಾವೂ ಕೂಡ ನಮ್ಮ ಕ್ಷೇತ್ರದವರೆ, ಸನ್ಮಾನ್ಯ ಸಭಾಧ್ಯಕ್ಷರೂ ಕೂಡ ಅಲ್ಲಿಂದಲೇ ಬಂದಿದ್ದೀರಿ. ದಯವಿಟ್ಟು ಇದರ ಬಗ್ಗೆ ಚರ್ಚೆ ನಡೆಸಲು ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು: ಮಾನ್ಯ ಸಚಿವರು ಮೊದಲು ಉತ್ತರ ಕೊಡಲಿ, ಅನಂತರ ಯೋಚನೆ ಮಾಡೋಣ.

ಶ್ರೀ ಹೆಚ್. ಗೋಪಾಲ ಭಂಡಾರಿ: ಮಾನ್ಯ ಅಧ್ಯಕ್ಷರೆ, ಮಾನ್ಯ ವಸಂತ ಬಂಗೇರ ಅವರ ಪ್ರಶ್ನೆಯಲ್ಲಿ ಕಾರ್ಕಳ ಕೂಡ ಸೇರಿದೆ.

ಅಧ್ಯಕ್ಷರು: ದಕ್ಷಿಣ ಕನ್ನಡ ಜಿಲ್ಲೆಯ ಅರ್ಧ ಭಾಗ ಸೇರಿದೆ.

ಶ್ರೀ ಹೆಚ್. ಗೋಪಾಲ ಭಂಡಾರಿ: ಈಗ ನಮ್ಮಲ್ಲಿ ವಿಶಿಷ್ಟವಾದಂತಹ ಸಮಸ್ಯೆ ಇದೆ. ಮಾನ್ಯ ಮುಖ್ಯಮಂತ್ರಿಗಳಿಗೆ ಈ ವಿಚಾರ ಗೊತ್ತಿದೆ. ನಮ್ಮಲ್ಲಿ ಎಲ್ಲಿಯವರೆಗೆ ಆಗಿದೆ ಅಂದರೆ ಅರಣ್ಯ ಇಲಾಖೆಯವರು ಇಷ್ಟು ಸರ್ವೆ ನಂಬರ್‌ಗಳು ಅರಣ್ಯ ಇಲಾಖೆಗೆ ಸೇರಬೇಕೆಂದು ಏನು ಪಟ್ಟಿ ಕೊಟ್ಟಿದ್ದಾರೆ, ಇದರಲ್ಲಿ ಕೆಲವು ಜಾಗಗಳಲ್ಲಿ ಬಹುಶಃ ಅರಣ್ಯವೇ ಇಲ್ಲ. ನಮ್ಮಲ್ಲಿ ಅರಣ್ಯ ಅಲ್ಲದೇ ಇದ್ದ ಜಾಗವನ್ನು ಅರಣ್ಯ ಇಲಾಖೆಯವರು ತಮ್ಮದು ಎಂದು ಹೇಳುತ್ತಾರೆ. ಕಂದಾಯ ದಾಖಲೆಗಳಲ್ಲಿ ಅದು ಸರ್ಕಾರಿ ಜಮೀನು ಎಂದು ಇದೆ. ಅರಣ್ಯದವರು ನಮ್ಮದು ಎಂದು ವಾದ ಮಾಡುತ್ತಾರೆ. ನಮ್ಮ ಉಡುಪಿ ಜಿಲ್ಲೆಯ ಚಾರದಲ್ಲಿ ನವೋದಯ ಶಾಲೆ ಇದೆ. ನವೋದಯ ಶಾಲೆ ಸೇರಿ 8 ಶಾಲೆಗಳಿವೆ. ಹೆಚ್ಚು ಕಡಿಮೆ 10 ಕೋಟಿ ರೂಪಾಯಿಯ ನವೋದಯ ಶಾಲೆಯ ಕಟ್ಟಡ ಸಂಕೀರ್ಣ ಇದೆ. ಅವೆಲ್ಲವೂ ವನ್ಯ ಜೀವಿ ಪ್ರದೇಶ ಎಂದು ಇವರು ಹೇಳುತ್ತಾರೆ. ಕಂದಾಯ ಇಲಾಖೆಯ ದಾಖಲೆಯಲ್ಲಿ ಎಲ್ಲಿಯೂ ಕೂಡ ಇಲ್ಲ. ಈ ರೀತಿಯಲ್ಲಿ ತಪ್ಪು ತಪ್ಪಾಗಿ ಇವರು ಎಲ್ಲವನ್ನೂ ಕೂಡ ನಮ್ಮದು ಎಂದು ಹೇಳಿ ದಾಖಲಿಸಿಕೊಳ್ಳುವ ಮುಖೇನ ಬಹಳಷ್ಟು ಸಮಸ್ಯೆಗಳು ಸೃಷ್ಟಿಯಾಗಿವೆ. ಅದರ ಜೊತೆಗೆ ಇನ್ನೊಂದು deemed forest ಸಮಸ್ಯೆ.

ಅಧ್ಯಕ್ಷರು: ಮಾನ್ಯ ಸಚಿವರು ಉತ್ತರ ಹೇಳಲಿ. ಅವರನ್ನು ಉತ್ತರ ಹೇಳಲಿಕ್ಕೇ ಬಿಟ್ಟಿಲ್ಲ.

ಶ್ರೀ ಹೆಚ್. ಗೋಪಾಲ ಭಂಡಾರಿ: ಎಲ್ಲದ್ದಕ್ಕೂ ಒಟ್ಟಿಗೆ ಉತ್ತರ ಕೊಡಲಿ.

ಶ್ರೀ ಡಿ.ಎನ್. ಜೀವರಾಜ್: ಒಬ್ಬೊಬ್ಬರಿಗೆ ಒಂದು ಸಾರಿ ಉತ್ತರ ಕೊಡುವುದರ ಬದಲು ಅವರು ಎಲ್ಲರಿಗೂ ಒಟ್ಟಿಗೆ ಉತ್ತರ ಕೊಡುವುದು ಒಳ್ಳೆಯದು.

ಶ್ರೀ ಹೆಚ್. ಗೋಪಾಲ ಭಂಡಾರಿ: ಅರಣ್ಯ ಇಲಾಖೆಯ ಆಕ್ರಮಣಕ್ಕೆ ಅರ್ಧ ಗಂಟೆ ಚರ್ಚೆ ಮಾಡುವುದಕ್ಕೆ ಕಾಲಾವಕಾಶ ಕೊಡಿ.

ಅಧ್ಯಕ್ಷರು: ಮಾನ್ಯ ಸಚಿವರು ಉತ್ತರ ನೀಡಿದ ನಂತರ ನೋಡೋಣ.

ಶ್ರೀ ಡಿ.ಎನ್. ಜೀವರಾಜ್: ಮಾನ್ಯ ಸದಸ್ಯರು deemed forest ಬಗ್ಗೆ ಮಾತನಾಡುತ್ತಿದ್ದಾರೆ.

ಅಧ್ಯಕ್ಷರು: ಒಂದು ನಿಮಿಷ ಮಾನ್ಯ ಸಚಿವರು ಉತ್ತರ ಹೇಳಲಿ. ಅನಂತರ ತಮ್ಮ ಪ್ರಶ್ನೆಗಳನ್ನು ಕೇಳಿ.

ಶ್ರೀ ಡಿ.ಎನ್. ಜೀವರಾಜ್: ಅದು ಬಹಳ serious ವಿಷಯವಾಗಿದೆ. deemed forest ಬಗ್ಗೆ ಮಾತನಾಡುತ್ತಿದ್ದಾರೆ. Deemed forest ಎಂದರೆ 25 ಸಾವಿರ ರೂಪಾಯಿ valuation ಇರುವಂತಹ ಈ ಜಾಗಗಳಿಗೂ ಕೂಡ 25 ಸಾವಿರ ರೂಪಾಯಿ ಮರದ valuation ಗೆ deemed forest ಎಂದು ಕರೆಯುತ್ತಾರೆ. ಒಂದು ಹೆಕ್ಟೇರ್ ಒಳಗಡೆ 19 ಮರಗಳಿಗೆ deemed forest ಎಂದು ಕರೆಯುತ್ತಾರೆ. ಅವತ್ತು ಸಾಗವಾನಿ ಮರಕ್ಕೆ 20 ರೂಪಾಯಿ ಬೆಲೆ ಇತ್ತು. ಇವತ್ತು ಸಾಗವಾನಿ ಮರಕ್ಕೆ sq. ft. ಗೆ 3,000 ರೂಪಾಯಿ ಆಗಿದೆ. ಈಗ ಮೂರು ಸಾವಿರ ರೂಪಾಯಿಗಳಿಗೂ ಸಿಕ್ಕುವುದಿಲ್ಲ. ಈಗ ಆ ರೇಷಿಯೋ ಮೇಲೆ ಬೆಲೆಯನ್ನು ಏರಿಸಬೇಕಾಗಿದೆ. 25000 ರೂಪಾಯಿಯನ್ನು ತಂದು ಇವತ್ತಿನ ಆ ರೇಷಿಯೋ ಮೇಲೆ ತಂದರೆ ಅದು deemed forest ಗೆ ತಂದರೆ ಅದು ಲಾಭವಾಗುತ್ತಿತ್ತು. ನಮ್ಮಲ್ಲಿ ಅಂಕಿ ಅಂಶಗಳನ್ನು ಇಟ್ಟುಕೊಂಡು ಇವತ್ತು ರೈತರಿಗೆ ತೊಂದರೆಯನ್ನು ಕೊಡುತ್ತಿದ್ದಾರೆ. ನಾವು ಮಲೆನಾಡಿನಲ್ಲಿ ಹುಟ್ಟಿರುವುದೇ ಪಾಪವೆನ್ನುವಂತಹ ಸ್ಥಿತಿ ಇದೆ. ಅವರು ಮಳೆ ಬರಬೇಕೆಂದರೆ ನಮ್ಮ ಹತ್ತಿರ ಬರಬೇಕು. ಅಲ್ಲಿ ರಸ್ತೆ ರಿಪೇರಿಯನ್ನು ಮಾಡುವುದಕ್ಕೂ ಸಹ ಬಿಡುವುದಿಲ್ಲ. ಅಲ್ಲಿ electric line ಹಾಕುವುದಕ್ಕೂ ಸಹ ಬಿಡುವುದಿಲ್ಲ. ಈ ಕಡೆ ಇದ್ದಕ್ಕಿದ್ದ ಹಾಗೆ man and animal conflict ಇದೆ. ಅದಕ್ಕೆ ಅಲ್ಲಿ ಹುಲಿ ಹಾಗೂ ಆನೆಯ ಅಭಯಾರಣ್ಯ ಮಾಡುತ್ತೇನೆಂದು ಹೇಳುತ್ತಾರೆ. ಇನ್ನೊಂದು ಕಡೆ man and man conflict ಇದೆ. ನಮ್ಮಲ್ಲಿ man and man ಯುದ್ಧ ನಡೆಯುತ್ತಿದ್ದರೂ ಅದನ್ನು ಕೇಳುವವರು ಯಾರು, ಇಲ್ಲ. ನಾವು ಇಲ್ಲಿ ಸಾಯುತ್ತಿದ್ದೇವೆ. ಕುರುಡುನ ರೀತಿ ಆನೆಯ ಬಾಲವನ್ನು

ಮುಟ್ಟಿ ಹಾವೆಂದು, ಹೊಟ್ಟೆ ಮುಟ್ಟಿ ಗುಡಾಣ ಎಂದು, ಕಾಲು ಮುಟ್ಟಿ ಕಂಬ ಎಂದು ಹೇಳಿದಂತಿದೆ. ಇದು ಈ ರೀತಿಯಾಗಿ ಚರ್ಚೆಯಾಗುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಬಗ್ಗೆ ಗಂಭೀರವಾಗಿ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕು. ತಾವು ಕೊಡಗಿನ ಬಂದವರಾಗಿದ್ದೀರಿ, ನಮಗೆ ಮಾಡನಾಡುವುದಕ್ಕೆ ಅವಕಾಶವನ್ನು ಕೊಡಿ. ಇದೇ ರೀತಿ ಹೇಳಿದರೆ ಅದು ಸರಿಯಾಗುವುದಿಲ್ಲ.

ಅಧ್ಯಕ್ಷರು: ಅವರು ಉತ್ತರವನ್ನು ಕೊಡಲಿ. ಆಮೇಲೆ ನೋಡೋಣ.

ಶ್ರೀ ಡಿ.ಎನ್. ಜೀವರಾಜ್: ನಮ್ಮಲ್ಲಿ 2 ರಿಂದ 3 ಸಾವಿರ ಮನೆಗಳನ್ನು ಕೊಡುತ್ತಿದ್ದಾರೆ. ಅಲ್ಲಿ ಒಂದು ಮನೆಯನ್ನು ಕಟ್ಟುವುದಕ್ಕೆ ಸಾಧ್ಯವಾಗಲಿಲ್ಲ. 75 ಮನೆಗಳನ್ನು ಹೊರತುಪಡಿಸಿ ಅಲ್ಲಿ ಮನೆಗಳನ್ನು ಕೇಳಿದರೆ ನಾವು ಈಗ 2011ರಲ್ಲಿ ನಾವಿದ್ದೇವೆ, 1904ನೇ ಇಸವಿಯಲ್ಲಿ, 1820ನೇ ಇಸವಿಯಲ್ಲಿ ಇದು ಕಾಡಾಗಿತ್ತು. ಈಗ ಇದನ್ನು incorporate ಮಾಡಿದ್ದೇವೆ ಅವರು ಹೇಳುತ್ತಾರೆ. ಅವರು ಇಷ್ಟು ವರ್ಷ ಏತಕ್ಕಾಗಿ ಮಾಡಲಿಲ್ಲ? ಈ ಎಲ್ಲಾ ಸಮಸ್ಯೆಗಳು ಬಹಳ ಸೀರಿಯಸ್ಸಾಗಿದೆ.

ಅಧ್ಯಕ್ಷರು: ಅವರು ಉತ್ತರವನ್ನು ಹೇಳುವುದಕ್ಕೆ ಬಿಡದೆ ಇದ್ದರೆ ಹೇಗೆ?

ಶ್ರೀ ಡಿ.ಎನ್. ಜೀವರಾಜ್: ಅವರು ತಾತ್ಕಾಲಿಕವಾಗಿ ಉತ್ತರವನ್ನು ಕೊಡಲಿ ಇದಕ್ಕೆ ಅರ್ಧ ಗಂಟೆ ಸಮಯವಲ್ಲ ಒಂದು ಗಂಟೆಯಾದರೂ ಚರ್ಚೆ ಮಾಡುವುದಕ್ಕೆ ಸಮಯವನ್ನು fix ಮಾಡಿ ಕೊಡಬೇಕು.

ಅಧ್ಯಕ್ಷರು: ಆಯಿತು, ಅರ್ಧ ಗಂಟೆ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಡುತ್ತೇನೆ.

ಶ್ರೀ ಸಿ.ಪಿ. ಯೋಗೇಶ್ವರ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆಗೆ ಲಿಖಿತವಾದಂತಹ ಉತ್ತರವನ್ನು ಕೊಟ್ಟಿದ್ದೇವೆ. ಆದರೂ ಕೂಡ ಏನು ನಮ್ಮ ರಾಜ್ಯದ 24 ಭಾಗ ಅರಣ್ಯವಿದೆ ಅದರ ಬಹುಪಾಲು ತಾಲ್ಲೂಕು ಸೇರಿದ ಹಾಗೆ, ಬಹು ಪಾಲು ಭಾಗ ಅರಣ್ಯದ ಮತ್ತು ಜನರ ಸಮಸ್ಯೆ ಮೊದಲಿನಿಂದಲೂ ಇದೆ. ಆದರೆ ಇತ್ತೀಚಿನ ದಿನಗಳಲ್ಲಿ ಅರಣ್ಯದ ಮೇಲೆ ಅತಿಕ್ರಮಣವು ಜಾಸ್ತಿಯಾಗುತ್ತಿದೆ. ಮಾನ್ಯ ಗೌರವಾನ್ವಿತ ಸದಸ್ಯರು ಹೇಳುತ್ತಿದ್ದಾರೆ. ಇದು ಜನಸಾಮಾನ್ಯರಿಗೆ ಸ್ಪಂದಿಸುವಂತಹ ವಿಚಾರವಾಗಿದೆ.

ಅಧ್ಯಕ್ಷರು: ಮಾನ್ಯ ಸಚಿವರೆ, ಪ್ರಶ್ನೆ ಅದಲ್ಲ. ನಿಮಗೆ ಅರಣ್ಯ ಯಾವುದು, ಕಂದಾಯ ಇಲಾಖೆ ಯಾವುದು? ನೀವು ಹೋದಲೆಲ್ಲಾ ಅರಣ್ಯ ಎಂದರೆ ಹೇಗೆ?

(ಗೊಂದಲ)

ಶ್ರೀ ವಸಂತ ಬಂಗೇರ: ಅರಣ್ಯ ಇಲಾಖೆಗೆ ಸೇರಿರುವಂತಹ ಜಾಗವನ್ನು ತೆಗೆದುಕೊಳ್ಳಬೇಕು ನೀವು ಅರಣ್ಯ ಜಾಗವನ್ನು ಬಿಡಬೇಡಿ.

ಅಧ್ಯಕ್ಷರು: ಎಲ್ಲಾ ಕಡೆಯಲ್ಲಿಯೂ ಇದೇ ಸಮಸ್ಯೆಯಾಗಿದೆ.

ಶ್ರೀ ವಸಂತ ಬಂಗೇರ: ನೀವು ಅರಣ್ಯ ಜಾಗದ ಬಗ್ಗೆ ಜಂಟಿ ಸರ್ವೆಯನ್ನು ಮಾಡಿ ಆ ಮೂಲಕ ನಿಮ್ಮ ಅರಣ್ಯ ಜಾಗವನ್ನು ತೆಗೆದುಕೊಳ್ಳಿ. ಬೇರೆ ಜಾಗವನ್ನು ಒತ್ತುವರಿ ಮಾಡಬೇಡಿ. ಕಂದಾಯ ಇಲಾಖೆಗೆ ಸೇರಿದ ಜಾಗವನ್ನು ಬಿಟ್ಟುಕೊಡಬೇಕು.

ಅಧ್ಯಕ್ಷರು: ಅರಣ್ಯ ಇಲಾಖೆಗೆ ಒಳಪಟ್ಟ ಜಾಗಗಳು, ಈ ವಿಚಾರವು ಬಹಳ ಗಂಭೀರವಾಗಿರುವುದರಿಂದ 7ನೇ ತಾರೀಖು ಅರ್ಧಗಂಟೆ ಕಾಲ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುತ್ತೇನೆ.

ಶ್ರೀ ವಸಂತ ಬಂಗೇರ: ಆಯಿತು.

ಮಾನ್ಯ ಸದಸ್ಯರು ತಮ್ಮ ಭಾಷಣವನ್ನು ಪರಿಷ್ಕರಿಸಿದ್ದಾರೆ.

ಏತ ನೀರಾವರಿ ಕಾಮಗಾರಿ

10 (125) ಶ್ರೀ ಎಂ.ಟಿ. ಕೃಷ್ಣಪ್ಪ (ತುರುವೇಕೆರೆ):– ಜಲ ಸಂಪನ್ಮೂಲ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ತುರುವೇಕೆರೆ ತಾಲ್ಲೂಕು ದಬ್ಬೇಘಟ್ಟ ಅಮ್ಮಸಂದ್ರ ಕಣತೂರು ಮತ್ತು ಮುದ್ದಹಳ್ಳಿ ಗ್ರಾಮಗಳ ಏತ ನೀರಾವರಿ ಕಾಮಗಾರಿ ಮಂಜೂರಾತಿಯಾಗಿದೆಯೇ;

ಆ) ಹಾಗಿದ್ದಲ್ಲಿ, ಈ ಕಾಮಗಾರಿಗಾಗಿ ಪ್ರಸಕ್ತ ವರ್ಷ ಮಂಜೂರಾದ ಹಣವೆಷ್ಟು; (ಮಾಹಿತಿ ಒದಗಿಸುವುದು)

ಇ) ಏತ ನೀರಾವರಿ ಕಾಮಗಾರಿ ಪ್ರಾರಂಭವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಕಾರಣಗಳೇನು ; (ಮಾಹಿತಿ ನೀಡುವುದು)

ಈ) ತುರುವೇಕೆರೆ ತಾಲ್ಲೂಕು ದಂಡಿನಶಿವರ ರಂಗಮಂದಿರವು ಶಿಥಿಲಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಹಾಗಿದ್ದಲ್ಲಿ, ಈ ಕಾಮಗಾರಿಯನ್ನು ಕೈಗೊಳ್ಳಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?